ಸಾಕ್ಷಿ ಯನ್ನು ದಿಃ 10.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ.

1. ನಮ್ಮ ತಾತ ಮರಿಯಪ್ಪನವರು ಸಹಿ ಮಾಡಿರುವ ದಿಃ13.05.1997 ಪಾಲುಪಾರಿಕತ್ತಿನ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಡಿ-23** ಎಂದು ಗುರುತಿಸಲಾಯಿತು.
2. ಸಾಕ್ಷಿಯು ನಿಡಿ - 21 ರಲ್ಲಿರುವ ತನ್ನ ತಾತ ರಾಮೇಗೌಡರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು **ನಿಡಿ - 21(ಬಿ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರ ವಕೀಲರಿಂದಃ**

1. ಈ ದಿನ ಸಾಕ್ಷಿ ಹೇಳುವಂತೆ ನನ್ನನ್ನು ಶಶಿ ಮತ್ತು ಕೃಷ್ಣ ರವರು ಕರೆದಿರುತ್ತಾರೆ.
2. ನನಗೆ ಈಗ 30 ವರ್ಷ. ನಾನು ಹುಟ್ಟಿದ ದಿನಾಂಕ ದಿಃ 07.08.1988.
3. 1992 ರಲ್ಲಿ ನಾನು 4 ವರ್ಷದ ಹುಡುಗ ಎಂದರೆ ಸರಿ. ಆ ಸಮಯದಲ್ಲಿ ನಿಮ್ಮ ತಾತ ಯಾವ ಪತ್ರ ಬರೆಯುತ್ತಿದ್ದರು ಎಂದು ಗೊತ್ತಿರಲಿಲ್ಲ ಎಂದರೆ ಸರಿ.
4. ನನ್ನ ತಾತ 2006 ರಲ್ಲಿ ಮೃತರಾಗಿದ್ದಾರೆ.
5. ನನ್ನ ತಾತ ಕೈನಲ್ಲಿ ಪತ್ರ ಬರೆದುಕೊಂಡು ಉಪನೊಂದಣಿ ಕಛೇರಿಗೆ ಪತ್ರ ತರುತ್ತಿದ್ದರು.
6. ಮರಿಯಪ್ಪ ಎಂಬ ಹೆಸರಿನವರು ತುಂಬಾ ಜನ ಪತ್ರ ಬರಹಗಾರರು ಇದ್ದಾರೆ ಎಂದರೆ, ಸರಿಯಲ್ಲ.
7. ನಿಡಿ - 21 ರಲ್ಲಿ ನಿಮ್ಮ ತಾತ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.
8. ಇತ್ತೀಚಿಗೆ ನೀವು ಹಳೆಯ ಪೇಪರ್ ನಲ್ಲಿ ಮರಿಯಪ್ಪ ಎಂದು ಸೀಲ್ ಮಾಡಿಕೊಂಡು ಪ್ರತಿವಾದಿ 8 ಹಾಗೂ 10 ರವರ ಜೊತೆ ಸೇರಿ ನಿಡಿ - 21 ನ್ನು ಹಾಗೂ ಸಹಿಗಳನ್ನು ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.
9. ನಿಡಿ - 21 ರಲ್ಲಿ ನಿಮ್ಮ ತಾತನ ಸಹಿ ಇಲ್ಲ ಎಂದರೆ ಸರಿಯಲ್ಲ. 8 ಹಾಗೂ 10 ನೇ ಪ್ರತಿವಾದಿಗಳ ಕೋರಿಕೆ ಮೇರೆಗೆ ಸುಳ್ಳು ದಾಖಲೆ ಸೃಷ್ಠಿ ಮಾಡಲು ಸಹಕರಿಸಿ, ಅವರ ಆಮೀಷಕ್ಕೆ ಬಲಿಯಾಗಿ ಅವರ ಪರವಾಗಿ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

10. ನಿಡಿ-21 ರಲ್ಲಿ ನಿಮ್ಮ ತಾತನ ಸಹಿ ಇಲ್ಲ ಎಂಬ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
11. ನಿಡಿ - 21 ರ ಮೊದಲ ಪುಟ್ಟದಲ್ಲಿ ಸೀಲು ಹಾಗೂ ಸಹಿ ಇಲ್ಲ ಎಂದರೆ ಸರಿ.
12. 8 ಮತ್ತು 10 ನೇ ಪ್ರತಿವಾದಿಗಳ ಜೊತೆ ಶಾಮೀಲಾಗಿ ವಾದಿಯ ಭಾಗಕ್ಕೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
13. ನಿಡಿ - 23 ಮೂಲ ದಾಖಲೆ ಅಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿರುವ ಸಹಿಗೆ ಹಾಗೂ ನಿಡಿ -21 ರಲ್ಲಿರುವ ನಿಮ್ಮ ತಾತನ ಸಹಿಗೆ ತಾಳೆ ಇಲ್ಲ ಎಂದರೆ ಸರಿಯಲ್ಲ.
14. ನಿಡಿ - 23 ನ್ನು ಈ ದಾವೆಗಾಗಿ ಸೃಷ್ಠಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ